ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಇದು ರಾಜ್ಯ ಸರ್ಕಾರದ ಸಂರಕ್ಷಿತ ಸ್ಮಾರಕವಾಗಿರುತ್ತದೆ.

ಆ) ದಿನಾಂಕ ೧೫-೨-೧೯೬೮ರಲ್ಲಿ ಈ ಸ್ಮಾರಕವನ್ನು ರಾಜ್ಯ ಸರ್ಕಾರದ ಸಂರಕ್ಷಿತ ಸ್ಮಾರಕ ವೆಂದು ಘೋಷಿಸಲಾಗಿದೆ. ಈ ಕೋಟೆಯು ಪೂರ್ಣ ಹಾಳಾಗುತ್ತಿರುವ ಸ್ಥಿತಿಯಲ್ಲಿ ಇರುವುದಿಲ್ಲ.

ಇ) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯು ಈ ಕೋಟೆಯನ್ನು ಸಂರಕ್ಷಿಸುವ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಚಂದ್ರಶೇಖರ್ ಎಂ. ಪಾಮಾನಿ.—ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ "ಇದು ರಾಜ್ಯ ಸರ್ಕಾರದ ಸಂರಕ್ಷಿತ ಸ್ಮಾರಕವಾಗಿರುತ್ತದೆ" ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇನ್ನು ಎರಡನೇ ಪ್ರಶ್ನೆಗೆ ಉತ್ತರವಾಗಿ "ದಿನಾಂಕ ೧೫-೨-೧೯೬೮ರಲ್ಲಿ ಈ ಸ್ಮಾರಕವನ್ನು ರಾಜ್ಯ ಸರ್ಕಾರದ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ. ಈ ಕೋಟೆಯು ಪೂರ್ಣವಾಗಿ ಹಾಳಾಗುತ್ತಿರುವ ಸ್ಥಿತಿಯಲ್ಲಿ ಇರುವುದಿಲ್ಲ" ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಈ ಕೋಟೆಯಂ ಈಗಾಗಲೇ ಹಾಳಾಗಿದೆ. ೧೫೮೮ರಲ್ಲಿ ಸಿರಸಂಗಿ ಜಯಂಪ್ಪನವರು ಕಟ್ಟಿಸಿರತಕ್ಕದ್ದು. ಈ ಕೋಟೆ ಬಹಳ ಸುಂದರವಾಗಿದೆ, ಮತ್ತು ಒಳ್ಳೆಯ ಪ್ರೇಕ್ಷಣೀಯ ಸ್ಥಳ. ಇದರ ಸಂರಕ್ಷಣೆಯಂ ಕೆಲಸವನ್ನು ಪೂರ್ಣವಾಗಿ ಸರ್ಕಾರವೇ ವಹಿಸಿಕೊಂಡು ಕೆಲಸ ಮಾಡುತ್ತದೆಯೆ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೆ, ಯೋಜನೇತರ ವೆಚ್ಚದಲ್ಲಿ ೨೫ ಲಕ್ಷ ರೂಪಾಯಿ ಗಳನ್ನು ಪ್ರಾಚ್ಯವಸ್ತು ಸಂರಕ್ಷಣೆಗಾಗಿ ಇಟ್ಟಿದ್ದೇವೆ. ಸುಮಾರು ೭೦೦ ಪ್ರಾಚ್ಯವಸ್ತು ಸಂರಕ್ಷಣಾ ಕೆಲಸಗಳಿವೆ. ಇವುಗಳಿಗೆ ನಮ್ಮದೇ ಆದ ಒಂದು ಆದ್ಯತೆಯ ಪಟ್ಟಿಯನ್ನು ತಯಾರಿಸಿದ್ದೇವೆ. ತೀರಾ ದುಸ್ಥಿತಿಯಲ್ಲಿರತಕ್ಕ ಗುಂಡಿಗುಂಡಾರಗಳನ್ನು ಸಂರಕ್ಷಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಆದರೆ ಇದು ಈಗ ಆದ್ಯತೆಯ ಪಟ್ಟಿಯಲ್ಲಿಲ್ಲ. ಈಗ ಮಾನ್ಯ ಸದಸ್ಯರಾದ ಪಾಮಾನಿಯವರು ಇದನ್ನು ಪ್ರಸ್ತಾಪ ಮಾಡಿರುವುದರಿಂದ ಈ ವರ್ಷ ಅಂದರೆ ೮೮-೮೯ರ ಸಾಲಿನಲ್ಲಿ ೧-೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಸುತ್ತೇನೆ.

ಶ್ರೀ ಚಂದ್ರಶೇಖರ್ ಎಂ. ಪಾಮಾನಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಈ ವರ್ಷ ದಲ್ಲೇ ೧-೨ ಲಕ್ಷ ರೂಪಾಯಿಗಳನ್ನು ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಂತ್ತೇವೆಂದು ಹೇಳಿದ್ದಾರೆ. ಇದಕ್ಕಾಗಿ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಸವದತ್ತಿಯಲ್ಲಿರುವ ಈ ಕೋಟೆಯು ಅತ್ಯಂತ ಪ್ರೇಕ್ಷಣೀಯ ಸ್ಥಳವಾಗಿರುವುದರಿಂದ ಪ್ರೇಕ್ಷಕರು ಬಹಳ ಜನ ಬರುತ್ತಿರುತ್ತಾರೆ. ಇದು ಸುಂದರವಾದ ಜಾಗವಾಗಿದ್ದು ಇಲ್ಲಿ ಒಂದು ಕಾಡು ಸಿದ್ದೇಶ್ವರ ದೇವಸ್ಥಾನ ಇರುತ್ತದೆ ಆದ್ದರಿಂದ ಇಲ್ಲಿಗೆ ಬರತಕ್ಕ ಯಾತ್ರಿಕರಿಗೆ ಮತ್ತು ಪ್ರೇಕ್ಷಕರಿಗೆ ಅನುಕೂಲವಾಗುವಂತೆ ಒಟವಾದುವುದಕ್ಕೆ ಮತ್ತು ಒಂದು ಬಯಲು ರಂಗ ಮಂಟಪವನ್ನು ಕಟ್ಟಿಸುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೆ, ಒಂದೊಂದು ತಾಲ್ಲೂಕಿಗೆ ಒಂದೊಂದು ಬಯಲು ರಂಗಮಂಟಪ ಕಟ್ಟಬೇಕೆಂಬ ಯೋಜನೆಯಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಲಕ್ಷರೂಪಾಯಿ ಯಂತೆ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವ ಜಾಗದಲ್ಲಿ ಕಾಡು ಸಿದ್ದೇಶ್ವರ ದೇವಸ್ಥಾನವಿದ್ದು ಅಲ್ಲಿಗೆ ಬಹಳ ಜನ ಯಾತ್ರಿಕರು ಮತ್ತು ಪ್ರೇಕ್ಷಕರು ಬರುತ್ತಿರುವುದರಿಂದ ಅಲ್ಲಿ ಒಂದು ಬಯಲು ರಂಗಮಂಟಪವಾಗಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಇದನ್ನು ಬರೆದು ಕೊಟ್ಟರೆ ಈ ವರ್ಷದಲ್ಲೇ ಮಾಡಿಸಿಕೊಡುತ್ತೇನೆ.

ಕೊಟಗಾರನ ಹಳ್ಳಿಯಲ್ಲಿ ಗ್ರಾಮೀಣ ಬ್ಯಾಂಕು ಕಟ್ಟಡ.

೧೭೨೭ ಶ್ರೀ ಬಿ. ಎಸ್. ಶಿವನಂಜಪ್ಪ (ಗುಬ್ಬಿ). ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಎಕ್ಸ್ಸೈಸ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಕೊಟಗಾರನಹಳ್ಳಿ ಗ್ರಾಮದಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕಿಗೆ ಕಟ್ಟಡವನ್ನು ಕಟ್ಟಿಸಲಾಗಿದೆಯೇ ? ಯಾವಾಗ ಕಟ್ಟಿಸಲಾಯಿತು? ಬ್ಯಾಂಕಿಗೆ ಯಾವಾಗ ಕೊಡಲಾಗಿದೆ? ನಿಗದಿ ಮಾಡಲಾದ ಬಾಡಿಗೆ ಎಷ್ಟು ?

ಆ) ಯಾವ ಯೋಜನೆಯಲ್ಲಿ ಕಟ್ಟಡವನ್ನು ಕಟ್ಟಿಸಲಾಗಿದೆ. ಯೋಜನೆಯ ಹೆಸರನ್ನು ನಮೂದಿಸಲಾಗಿದೆಯೇ ? ಹಾಗಾದರೆ ಯಾವಾಗ ನಮೂದಿಸುತ್ತೀರಾ ?

ಇ) ಕಟ್ಟಡಕ್ಕೆ ಸ್ಥಳವನ್ನು ದಾನವಾಗಿ ಪಡೆಯಲಾಗಿದೆಯೆ ? ಕಟ್ಟಡಕ್ಕಾಗಿ ದಾನ ಮಾಡಿದ ದಾನಿಗಳ ಹೆಸರನ್ನು ಬರೆಸಲಾಗಿದೆಯೆ ?

ಈ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಆರ್. ವಿ. ದೇಶಪಾಂಡೆ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಎಕ್ಸ್‌ಸ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಪರವಾಗಿ)—

ಅ) ಹೌದು, ೨೩-೩-೧೯೮೬ರಲ್ಲಿ ಕಟ್ಟಡವನ್ನು ಕಟ್ಟಿ ಬ್ಯಾಂಕಿನ ಸುಬರ್ದಿಗೆ ದಿನಾಂಕ ೧೦-೧೨-೧೯೮೭ರಂದು ಕೊಟ್ಟಿರುತ್ತದೆ. ಬಾಡಿಗೆಯನ್ನು ಜಿಲ್ಲಾ ಪರಿಷತ್ತು ತಾಂತ್ರಿಕ ವಿಭಾಗ ದವರು ನಿಗದಿ ಮಾಡಿರುತ್ತಾರೆ.

ಆ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ ಕಟ್ಟಿಸಿರುತ್ತದೆ.

ಇ) ಸ್ಥಳವನ್ನು ದಾನವಾಗಿ ಕೊಟ್ಟಿರುತ್ತಾರೆ. ಕಟ್ಟಡಕ್ಕೆ ದಾನಿಗಳ ಹೆಸರನ್ನು ಬರೆಯಿಸಿರುವುದಿಲ್ಲಾ.

ಈ) ಕಟ್ಟಡದ ಹಾಗೂ ನಿವೇಶನದ ಕಿಮ್ಮತ್ತಿನ ಅರ್ಧ ಭಾಗವನ್ನು ದಾನಿಗಳು ಕೊಟ್ಟಲ್ಲಿ ಜಿಲ್ಲಾ ಪರಿಷತ್ತು ಅವರ ಹೆಸರನ್ನು ಬರೆಯುವ ಬಗ್ಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಜಿ. ಎಸ್ ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಆ ಭಾಗದ ಶಾಸಕನಾಗಿದ್ದಾಗ ೧೯೮೦ನೇ ಇಸವಿಯಲ್ಲಿ ಆ ಜಾಗವನ್ನು ದಾನಿಗಳ ಮೂಲಕ ಕೊಡಿಸಲಾಗಿತ್ತು. ದಾನಿಗಳು ಜಾಗ ವನ್ನು ಕೊಡುವಾಗ ಪಂಚಾಯತಿ ಮುಂದೆ ದಾನಿಗಳ ಹೆಸರು ಬರಬೇಕು ಎನ್ನುವ ವಿಚಾರದಲ್ಲಿಯೂ ಕೂಡ ತೀರ್ಮಾನವಾಗಿತ್ತು ಮತ್ತು ಕಟ್ಟಡ ಕಟ್ಟಲಿಕ್ಕೆ ಎಷ್ಟು ಖರ್ಚಾಗುತ್ತದೋ ಅಷ್ಟರಮೇಲೂ ದಾನಿಗಳು ಕೊಡಬೇಕಾಗುತ್ತದೆಂದು ಹೇಳಿದ್ದಕ್ಕೆ ಎಕ್ಸ್‌ಟ್ರಾ ೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಿ ಬ್ಯಾಂಕ್ ಸುಪರ್ದಿಗೆ ಕೊಟ್ಟು ತಮ್ಮ ಫೋಟೋವನ್ನೂ ಕೂಡ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ ದಾನಿಗಳ ಹೆಸರನ್ನು ಬರೆಯದೆ, ಎನ್. ಆರ್. ಇ. ಪಿ. ಯಿಂದ ತೆಗೆದು ಕೊಂಡ ಕಾರ್ಯಕ್ರಮ. ಸರ್ಕಾರದ ಯೋಜನೆಯಿಂದ ಬಂದಿರತಕ್ಕಂಥದ್ದು ಎಂದು ಮಾಡಿದ್ದಾರೆ ಆ ಬ್ಯಾಂಕಿನ ಮ್ಯಾನೇಜರ್ ಸ್ವಲ್ಪ ರಾಜಕೀಯ ಮಾಡಿದ ಎಂದು ಕಾಣುತ್ತದೆ, ಅವರ ಹೆಸರನ್ನು ಅಳಿಸಿ ಬಿಟ್ಟು ಕಲ್ಪತರು ಬ್ಯಾಂಕ್ ಎಂದು ಹೆಸರು ಬರೆದಿದ್ದಾರೆ. ಕೆಲವು ಯೋಜನೆಗಳಿಗೆ ಊರಿನ ಜನರು ಮುಂದೆ ಬರಬೇಕು ಪಬ್ಲಿಕ್ ಪಾರ್ಟಿಸಿಪೇಟ್ ಮಾಡಬೇಕು, ದಾನಿಗಳಿದ್ದರೆ ಕಟ್ಟಡಗಳನ್ನು ಕಟ್ಟಿಸಿ ಕೊಡಬಹುದು ಎಂದು ಸರ್ಕಾರದವರು ಹೇಳುವಾಗ, ದಾನಿಗಳು ಮುಂದೆ ಒಂದರೆ ಅವರ ಹೆಸರನ್ನು ಹಾಕಲಿಕ್ಕೆ ತೊಂದರೆ ಏನೂ ಇರಂವುದಿಲ್ಲ ಬ್ಯಾಂಕಿನ ಅಧಿಕಾರಿ ಈ ರೀತಿ ಮಾಡಿರುವುದರಿಂದ ಮಂತ್ರಿ ಅವರ ಹೆಸರನ್ನು ಬರೆಯಲಿಕ್ಕೆ ಆದೇಶ ಕೊಟ್ಟು ಬ್ಯಾಂಕಿನ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ತೆಗೆದು ಕೊಳ್ಳಬೇಕು. ಮೇಲಿನ ಅಧಿಕಾರಿಗಳಿಗೆ ಇದರ ಬಗ್ಗೆ ಬರೆದು ಸೂಕ್ತ ಕ್ರಮ ತೆಗೆದುಕೊಳ್ಳಲು ಫೋಟೋ ಮತ್ತು ಮನವಿಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ.

(ಮನವಿ ಮತ್ತು ಫೋಟೋ ಕಳುಹಿಸಿಕೊಟ್ಟರು.)

ಶ್ರೀ ಆರ್. ವಿ. ದೇಶಪಾಂಡೆ –ಮಾನ್ಯ ಅಧ್ಯಕ್ಷರೇ, ಈಗಾಗಲೇ ಎನ್‌ಆರ್‌ಇಪಿಯಿಂದ ಈ ಕೆಲಸವನ್ನು ತೆಗೆದುಕೊಂಡು ೫೦ ಸಾವಿರ ರೂಪಾಯಿಗಳು ಖರ್ಚಾಗಿರುತ್ತದೆ. ೨೩-೩-೧೯೮೬ ರಲ್ಲಿಯೇ ಕೆಲಸ ಮುಗಿಸಲಾಗಿದೆ. ದಾನಿಗಳು ಜಾಗವನ್ನು ಕೊಟ್ಟಿರುವುದು ನಿಜ. ಶ್ರೀಯುತ ಕೃಷ್ಣಮೂರ್ತಿ ಎಂಬುವರು ಜಾಗವನ್ನು ದಾನ ಮಾಡಿದ್ದಾರೆ, ಮಾನ್ಯ ಸದಸ್ಯರು ಹೇಳಿದಂತೆ ಬ್ಯಾಂಕ್ ಮ್ಯಾನೇಜರ್ ಮೇಲೆ ಕ್ರಮತೆಗೆದುಕೊಳ್ಳಬೇಕೆಂದರೆ ಅವರ ಮೇಲೆ ನಮಗೇನು ಕಂಟ್ರೋಲ್

ಇರುವುದಿಲ್ಲ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರು ಆ ಬ್ಯಾಂಕ್ ಮ್ಯಾನೇಜರ್ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಟ್ಟಡದ ಹೆಸರು ದಾನಿಗಳದು ಇರಬೇಕು ಎನ್ನುವ ಬಗ್ಗೆ ಪರಿಶೀಲನೆ ಮಾಡಿ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಹೇಳಿದ ಹಾಗೆ ಬ್ಯಾಂಕ್ ಮ್ಯಾನೇಜರ್ ಮೇಲೆ ನೇರವಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಸಂಬಂಧಪಟ್ಟ ಮಾಲೀಕರ ಹೆಸರನ್ನು ಬ್ಯಾಂಕಿಗೆ ಬರೆಸಬೇಕಾಗಿತ್ತು. ಇದು ಸರ್ಕಾರಿ ಕಾರ್ಯಕ್ರಮ ವೆಂದು ಹೇಳಿ ಈ ರೀತಿ ಮಾಡಿದರೆ ಯಾರು ದಾನಿಗಳು ಮುಂದೆ ಬರುವುದಿಲ್ಲ. ನನ್ನ ಹೆಸರು ಕಟ್ಟಡದ ಮೇಲೆ ಬರಬೇಕು ಎನ್ನುವ ಹಿನ್ನೆಲೆಯಲ್ಲಿ ಇಂಥ ಕಾರ್ಯಕ್ರಮಗಳನ್ನು ಮಾಡಿಕೊಟ್ಟಾಗ ಅಧಿಕಾರಿಗಳ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ ಎಂ. ಡಿ. ಗೆ ಬರೆಯಿರಿ. ಮನವಿ ಕೊಟ್ಟಿದ್ದಾರೆ, ಅವರಿಗೇನೇ ಬರೆಯಿರಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮನವಿಯನ್ನು ಕಳುಹಿಸಿಕೊಡಲಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಜನತಾ ಮನೆಗಳ ನಿರ್ಮಾಣ ಕುರಿತು

೧೮೭೯. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಜನತಾ ಮನೆಗಳ ನಿರ್ಮಿಸುವ ಕಾರ್ಯವನ್ನು ಭೂ ಸೇನಾ ನಿಗಮಕ್ಕೆ ವಹಿಸಿರುವುದು ನಿಜವೇ ?

ಆ) ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಒಟ್ಟು ಮೊತ್ತ ಎಷ್ಟು ?

ಇ) ಕೊಡಗು ಜಿಲ್ಲೆಯಲ್ಲಿ, ಭೂ ಸೇನಾ ನಿಗಮದಿಂದ ನಿರ್ಮಿಸಲಾದ ಅಂತಹ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಮೊಹಮ್ಮದ್ ಮೊಯೀನುದ್ದೀನ್, (ವಸತಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಬಹಳ ಸಂಭವಾಗಿ ಪ್ರಶ್ನೆಗೆ ಉತ್ತರ ಮಾಡಿದ್ದಾರೆ. ಸರ್ಕಾರದವರು ಜನತಾ ಮನೆಗಳನ್ನು ಕಟ್ಟಲು ಭೂ ಸೇನೆ ನಿಗಮಕ್ಕೆ ಕೊಟ್ಟಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಜನತಾ ಮನೆಗಳನ್ನು ಕರ್ನಾಟಕದಲ್ಲಿ ಕಟ್ಟಲಿಲ್ಲವೇ ? ಜನತಾ ಮನೆಗಳನ್ನು ಕಟ್ಟಲು ಎಷ್ಟು ಹಣವನ್ನು ಕಳೆದ ಮೂರು ವರ್ಷದಲ್ಲಿ ಖರ್ಚು ಮಾಡಿದ್ದೀರಿ ಹೇಳಬೇಕು. ಅಧಿಕಾರಿಗಳು ಪ್ರಶ್ನೆಗೆ ಉತ್ತರ ಬರೆದುಕೊಡುತ್ತಾರೆ ಅದನ್ನು ಇವರು ಇಲ್ಲಿ ಬಂದು ಓದಿಬಿಡುತ್ತಾರೆ. ಮೂರು ವರ್ಷಗಳಿಂದಲೂ ಜನತಾ ಮನೆಗಳನ್ನು ಕಟ್ಟಲೇ ಇಲ್ಲವೇ ? ಭೂಸೇನಾ ನಿಗಮಕ್ಕೆ ಕೊಟ್ಟಿಲ್ಲವೆಂದರೆ ಬೇರೆ ಯಾರಿಗಾದರೂ ಕೊಡಲೇಬೇಕೆಲ್ಲ. ಎಷ್ಟು ಜಮೀನನ್ನು ಕೊಟ್ಟಿದ್ದೀರಿ, ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ ಎಷ್ಟು ಹಣ ಖರ್ಚಾಗಿದೆ ಅದರ ವಿವರಗಳನ್ನು ಮಾನ್ಯ ಸಚಿವರು ದಯವಿಟ್ಟು ಕೊಡಬೇಕು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ ಜನತಾ ಮನೆಗಳನ್ನು ಗ್ರೂಪ್ ಹೌಸಿಂಗ್ ಸ್ಕೀಮ್, ಆರ್‌ಎಲ್‌ಇಜಿಪಿನಲ್ಲಿ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಕಟ್ಟಲಾಗುತ್ತದೆ. ಜನತಾ ಮನೆಗಳನ್ನು ಕಟ್ಟಲಿಕ್ಕೆ ಹೌಸಿಂಗ್ ಇಲಾಖೆಯಿಂದ, ನಮ್ಮ ಇಲಾಖೆಯಿಂದ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ಕೊಟ್ಟಿಲ್ಲ. ಈ ಪ್ರಶ್ನೆಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹಾಕಿದರೆ ಆದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ.